ಸಾಕ್ಷಿಗೆ ದಿನಾಂಕಃ **10.07.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಃ ಪ್ರತಿವಾದಿ ಪರಃ ಶ್ರೀ.ಬಿ ಕೆ ವಿ ವಕೀಲರಿಂದ ಃ

ಆಡುವಳ್ಳಿ ಗ್ರಾಮದ ಸರ್ವೆ ನಂಃ 242 ರಲ್ಲಿ ಎಷ್ಟು ವಿಸ್ತೀರ್ಣ ಬರುತ್ತದೆ ಎಂದು ನನಗೆ ಗೊತ್ತಿಲ್ಲ. ಆಡುವಳ್ಳಿ ಗ್ರಾಮದ ಸರ್ವ ನಂಃ 288 ರಲ್ಲಿ ಎಷ್ಟು ವಿಸ್ತೀರ್ಣ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಅದು ರೀ ಸರ್ವೆ ನಂಬರ್ ಆಗಿರುತ್ತದೆ. ರೀ ಸರ್ವೆ ನಂಬರ್ ನಲ್ಲಿ ಒಟ್ಟು ಎಷ್ಟು ವಿಸ್ತೀರ್ಣ ಇರುತ್ತದೆ ನನಗೆ ಗೊತ್ತಿಲ್ಲ. ಸರ್ವೆ ನಂಃ 242 ರೀ ಸರ್ವೆಯಾಗಿ ಸರ್ವೆ ನಂಃ 288 ಆಗಿರುತ್ತದೆ ಯಾವ ವರ್ಷ ಆಗಿರುತ್ತದೆ ನನಗೆ ಗೊತ್ತಿರುವುದಿಲ್ಲ. ಸರ್ವೆ ನಂಃ 288 ನ್ನು ಅರ್ಜಿ ಕೊಟ್ಟು ಯಾರು ರೀ ಸರ್ವೆ ಮಾಡಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

ಆಡುವಳ್ಳಿ ಗ್ರಾಮದ ಸರ್ವೆ ನಂಃ 242 ರ ಯಾವ ದಿಕ್ಕಿನಲ್ಲಿ ನನ್ನ ಜಮೀನು ಬರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯಲ್ಲಿ ಯಾವುದೇ ಸಾರ್ವಜನಿಕ ರಸ್ತೆ ಇರುವುದಿಲ್ಲ. ನಿಪಿ-1 ಕ್ರಯಪತ್ರವನ್ನು ಯಾರು ಮಾಹಿತಿ ಕೊಟ್ಟು ಬರೆಸಿರುತ್ತಾರೆ ಎಂಬ ಬಗ್ಗೆ ನನಗೆ ಗೊತ್ತಿದೆ. ಸದರಿ ಪತ್ರಕ್ಕೆ ಮಾಹಿತಿಯನ್ನು ರಮೇಶ್, ಸುಧಾಕರ ಹಾಗು ಚಂದ್ರಹಾಸ್ ರವರು ನೀಡಿರುತ್ತಾರೆ. ಸದರಿ ನಿಪಿ-1 ರಲ್ಲಿರುವ ವಿಚಾರಗಳು ನನಗೆ ಗೊತ್ತು. ನಿಪಿ-1 ರಲ್ಲಿ ಒಂದು ರಸ್ತೆ ಹಾದುಹೋಗಿರುತ್ತದೆ ಎಂದು ಬರೆಯಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-1 ಮೇಗರಮಕ್ಕಿ ಗ್ರಾಮಕ್ಕೆ ಸಂಬಂಧಪಟ್ಟಿದ್ದಾಗಿರುತ್ತದೆ ಎಂದರೆ ಸರಿ. ನಿಪಿ-1 ರಲ್ಲಿ ಮೇಗರಮಕ್ಕಿ ಗ್ರಾಮದ ಸರ್ವೆ ನಂಃ 242 ಹೊಸ ಸರ್ವೆ ನಃ 288 ಎಂದು ಬರೆಯಲಾಗಿರುತ್ತದೆ ಎಂದರೆ ಸರಿ. ಮೇಗರಮಕ್ಕಿ ಮತ್ತು ಆಡುವಳ್ಳಿ ಗ್ರಾಮ ಎರಡು ಬೇರೆ ಬೇರೆ ಎಂದರೆ ಸರಿ. ಮೇಗರಮಕ್ಕಿ ಮತ್ತು ಆಡುವಳ್ಳಿ ಗ್ರಾಮದ ಮಧ್ಯೆದಲ್ಲಿ ಕೊಳಲೆ ಗ್ರಾಮ ಬರುತ್ತದೆ ಎಂದರೆ ಸರಿ. ಸದರಿ ಕೊಳಲೆ ಗ್ರಾಮದಲ್ಲೂ

ಸಹ 100-200 ವಾಸದ ಮನೆಗಳು ,ಹಿಡುವಳಿ ಜಮೀನುಗಳು ಇರುತ್ತವೆ ಎಂದರೆ ಸರಿ.

ನಾಗಪ್ಪ ಗೌಡರಿಗೆ 3 ಗುಂಟೆ ಜಾಗ ಮಂಜೂರಾಗಿರುವ ಜಮೀನುಗಳ ಸಂಬಂಧ ದಾಖಲೆಗಳನ್ನು ನಾನು ನೋಡಿರುತ್ತೇನೆ. ದಾವಾಸ್ವತ್ತಿನ ಚೆಕ್ಕುಬಂಧಿ ವಾದಪತ್ರದಲ್ಲಿ ತೋರಿಸಿದಂತೆ ನಾಗಪ್ಪ ಗೌಡರಿಗೆ ಮಂಜೂರಾಗಿರುವ ಮಂಜೂರಾತಿ ಪತ್ರದಲ್ಲಿ ತೋರಿಸಿರುತ್ತಾರೆ. ನಿಪಿ-1 ಕ್ರಯಪತ್ರ ಆಗುವ ಸಮಯದಲ್ಲಿ ನಾನು ನಾಗಪ್ಪ ಗೌಡರವರ ಮಕ್ಕಳಿಂದ ಮಂಜೂರಾತಿ ಪತ್ರ ಪಡೆದುಕೊಂಡಿರುತ್ತೇನೆ.

ನಾನು ಕ್ರಯಪತ್ರ ಮಾಡಿಕೊಳ್ಳುವ ಮುಂಚೆ ನಾಗಪ್ಪ ಗೌಡರಿಗೆ ಎಷ್ಟು ಜನ ಮಕ್ಕಳು ಇದ್ದರು ಎಂದು ಗೊತ್ತಿತ್ತು ಅವರುಗಳು 3 ಜನ ಗಂಡು ಮಕ್ಕಳು, 4 ಜನ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ನಾಗಪ್ಪಗೌಡರು ತನ್ನ ಜೀವಿತ ಕಾಲದಲ್ಲಿ ಕುಟುಂಬದ ವ್ಯವಸ್ಥಾ ಪತ್ರ ಮಾಡಿರುವುದಿಲ್ಲ ಎಂದರೆ ಸರಿ. ನಾಗಪ್ಪಗೌಡರು ಪೌತಿಯಾದ ನಂತರ ಸದರಿ 3 ಗುಂಟೆ ಪೌತಿ ಖಾತೆ ಮೂಲಕ 3 ಜನ ಗಂಡು ಮಕ್ಕಳಿಗೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಎಲ್ಲರ ಒಪ್ಪಿಗೆ ಮೇಲೆ ಆಗಿರುತ್ತದೆ ಎಂದು ನುಡಿಯುತ್ತಾರೆ.

ನಾಗಪ್ಪ ಗೌಡರ ಮಕ್ಕಳಿಂದ ನಾಗಪ್ಪಗೌಡರ ಹೆಸರಿಗೆ ಆಗಿರುವ ಮ್ಯುಟೇಶನ್ ಮತ್ತು ಪಹಣಿ ಪಡೆದುಕೊಂಡಿರುತ್ತೇನೆ ಎಂದರೆ ಸರಿ. ಸದರಿ ದಾಖಲೆಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ನಾಗಪ್ಪಗೌಡರ ಪೌತಿಯಾದ ನಂತರ ಸದರಿ 3 ಗುಂಟೆ ಜಾಗವು ಅವರ ಎಲ್ಲಾ ವಾರಸುದಾರರ ಹೆಸರಿನಲ್ಲಿ ಖಾತೆ ಬದಲಾವಣೆಯಾಗಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು 3 ಜನ ಮಕ್ಕಳಿಗೆ ಆಗಿರುತ್ತದೆ, ಅದಕ್ಕೆ ಎಲ್ಲರ ಒಪ್ಪಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಉಳಿದ ಮಕ್ಕಳ ಒಪ್ಪಿಗೆ ಆಧಾರದ ಮೇಲೆ 3

ಜನ ಮಕ್ಕಳಿಗೆ ಮ್ಯುಟೇಶನ್ ಆಗಿರುವ ದಾಖಲೆಯನ್ನು ನಾನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿ-1 ಕ್ರಯಪತ್ರ ಆಗುವ ಸಮಯದಲ್ಲಿ ಒಪ್ಪಿಗೆಯಿಂದ ಆಗಿರುವ ಮ್ಯುಟೇಶನ್ ಅನ್ನು ಪಡೆಯಲು ನಾನು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ.

ನಿಪಿ-1 ಕ್ರಯಪತ್ರ ಆದ ದಿನವೇ ನನಗೆ ಆಸ್ತಿಯ ಸ್ವಾಧೀನ ಕೊಟ್ಟಿರುತ್ತಾರೆ. ಸದರಿ ದಾವಾ ಆಸ್ತಿಯಿಂದ ನಿಪಿ-1 ವಿಕ್ರಯದಾರರ ಮನೆ 5 ಕಿ.ಮೀ ದೂರದಲ್ಲಿರುತ್ತದೆ. ನಿಪಿ-1 ರಲ್ಲಿ ನನಗೆ ನೀಡಿರುವ ಸ್ವಾಧೀನದ ಬಗ್ಗೆ ಬರೆದಿರುವ ವಿಚಾರ ಸರಿ ಇರುತ್ತದೆ. ಸದರಿ ದಾವಾ ಆಸ್ತಿ ನಿಪಿ-1 ರ ಮೂಲಕ ನನಗೆ ಕ್ರಯಕ್ಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ತೋರಿಸಿರುವ ಆಸ್ತಿಯು ನಿಪಿ-1 ಆಗುವ ಸಮಯದಲ್ಲಿ ಸದರಿ ವಿಕ್ರಯದಾರರ ಸ್ವಾಧೀನದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ.

ನಾಗಪ್ಪ ಗೌಡರ ಹೆಸರಿನಲ್ಲಿದ್ದ 3 ಗುಂಟೆ ಜಾಗ ನಿವೇಶನ ಆಗಿರುವ ದಾಖಲೆಗಳನ್ನು ನಾನು ನೋಡಿರುತ್ತೇನೆ. ಸದರಿ 3 ಗುಂಟೆ ಯಾವ ಸಮಯದಲ್ಲಿ ಸರ್ವೆ ಆಗಿ ವಿಕ್ರಯದಾರರ ಹೆಸರಿಗೆ ವಿಸ್ತೀರ್ಣದ ಬಗ್ಗೆ ಅವರ ಹೆಸರಿಗೆ ದಾಖಲಾಗಿರುವ ಬಗ್ಗೆ ನಾನು ದಾಖಲೆಗಳನ್ನು ನೋಡಿರುವುದಿಲ್ಲ. ಸದರಿ ದಾಖಲೆಗಳು ನಿಪಿ-1 ಆಗುವ ಸಮಯದಲ್ಲಿ ನನ್ನ ಸ್ವಾಧೀನದಲ್ಲಿತ್ತು. ಸದರಿ ದಾಖಲೆಗಳು ಈಗಲೂ ಸಹ ನನ್ನ ಬಳಿ ಇರುತ್ತದೆ ಎಂದರೆ ಸರಿ. ಸದರಿ ದಾಖಲೆಗಳನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿಪಿ-1 ರಲ್ಲಿ ತೋರಿಸಿರುವ ದಾರಿಯನ್ನು ನಾನು ವಾದಪತ್ರದಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಸದರಿ ದಾರಿ ಮಾಮೂಲಿ ದಾರಿಯಾಗಿದ್ದು, ಸರ್ಕಾರಿ ದಾರಿಯಾಗಿರುವುದಿಲ್ಲ ಎಂದು

ನುಡಿಯುತ್ತಾರೆ. ಸದರಿ ದಾರಿಯು ನಮ್ಮ 3 ಗುಂಟೆ ಜಾಗದಿಂದ ಪಕ್ಕದಲ್ಲಿರುವ ಜಮೀನು ಸರ್ವೆ ನಂಃ 228 ಕ್ಕೆ ಹಾದುಹೋಗುತ್ತದೆ. ಸದರಿ ದಾರಿಯು ನಮ್ಮ ಜಮೀನಿಗೆ ಆಡುವಳ್ಳಿ ಗ್ರಾಮದಿಂದ ಬರುತ್ತದೆ. ನನ್ನ ಜಮೀನಿನಿಂದ ಲಗತ್ತಾಗಿರುವ ಸರ್ವೆ ನಂಃ 288 ಕ್ಕೆ ಸದರಿ ದಾರಿ ಹಾದುಹೋಗಿದ್ದು, ಅದು 20 ಅಡಿಗಳವರೆಗೆ ಇರುತ್ತದೆ.

ಸರ್ವೆ ನಂಃ 228 ನಮ್ಮ ತಂದೆ ಕಾಲದಲ್ಲಿ ಸರ್ವೆ ಆಗಿರುತ್ತದೆ. ಸದರಿ ಸರ್ವೆ ಆಗಿರುವ ದಾಖಲೆಗಳು ನನ್ನ ಬಳಿ ಇರುತ್ತದೆ. ನಾನು ದಾವಾಸ್ವತ್ತಿನಲ್ಲಿ ಮನೆ ಕಟ್ಟಿರುವ ಜಾಗದಿಂದ 20 ಅಡಿ ದೂರದಲ್ಲಿ ಪೂರ್ವಕ್ಕೆ ನನ್ನ ಹಿಡುವಳಿಯ ಸರ್ವೆನಂಃ 228 ಇರುತ್ತದೆ. ದಾವಾಸ್ವತ್ತು ನಿಪಿ-1 ಆಗುವ ಸಮಯದಲ್ಲಿ ಪೂರ್ವ ದಿಕ್ಕಿನಲ್ಲಿ ನನ್ನದೇ ಆದಂತಹ ಸರ್ವೆ ನಂಃ 228 ಬರುತ್ತದೆ ಎಂದು ಹೇಳಿ ಬರೆಸಿರುವುದಿಲ್ಲ. ಸರ್ವೆ ನಂಃ 228 ನನ್ನ ಹಿಡುವಳಿ ಜಾಗಕ್ಕೆ ಸಂಬಂಧಿಸಿ ಸರ್ವೇಯರ್ ರವರು ನೀಡಿರುವ ನಕಾಶೆ ಮತ್ತು ವರದಿಯಲ್ಲಿ ನಾಗಪ್ಪಗೌಡರಿಗೆ ಮಂಜೂರಾಗಿರುವ ಜಮೀನು ಯಾವ ದಿಕ್ಕಿನಲ್ಲಿ ಬರುತ್ತದೆ ಎಂದು ಬರೆಸಿರುವ ವಿಚಾರ ನನಗೆ ಗೊತ್ತಿಲ್ಲ. ನನಗೆ ಇರುವ ಸರ್ವೆ ನಂಃ 228 ರ ಹಿಡುವಳಿ ಜಾಗಕ್ಕೆ ಸಂಬಂಧಿಸಿ ದಾಖಲೆಗಳನ್ನು ಈ ದಾವೆ ಹೂಡುವ ಸಮಯದಲ್ಲಿ ವಕೀಲರಿಗೆ ನೀಡಿರುತ್ತೇನೆ. ನಿಪಿ-1 ಕ್ರಯಪತ್ರವಾಗುವ ಸಮಯದಲ್ಲಿ ದಾವಾಸ್ವತ್ತು ಎಷ್ಟು ವರ್ಷದಿಂದ ವಿಕ್ರಯದಾರರ ಸ್ವಾಧೀನದಲ್ಲಿರುತ್ತದೆ ಎಂದು ಅವರು ನನಗೆ ತಿಳಿಸಿರುವುದಿಲ್ಲ. ನಾಗಪ್ಪಗೌಡರಿಗೆ ಮಂಜೂರಾಗಿರುವ ಜಮಿನಿಗೆ ಸಂಬಂಧಿಸಿ ರಿಜಿಸ್ಟರ್ ನಕಲನ್ನು ನಾನು ಪಡೆದುಕೊಂಡಿರುತ್ತೇನೆ. ಸದರಿ ರಿಜಿಸ್ಟರ್ ವಹಿಯಲ್ಲಿ ವಾದಪತ್ರದಲ್ಲಿ ತೋರಿಸಿರುವ ಚೆಕ್ಕುಬಂಧಿ ರಿಜಿಸ್ಟರ್ ನಲ್ಲಿ ತೋರಿಸಲಾಗಿರುತ್ತದೆ. ಸದರಿ ರಿಜಿಸ್ಟರ್ ನಲ್ಲಿ ಮೇಗರಮಕ್ಕಿ ಗ್ರಾಮದಲ್ಲಿ 3 ಗುಂಟೆ ಜಾಗ ಮಂಜೂರಾದ ಬಗ್ಗೆ ನಮೂದು ಇತ್ತೋ ಇಲ್ಲವೋ ಎಂದು ನಾನು ನೋಡಿರುವುದಿಲ್ಲ.

ನಾಗಪ್ಪಗೌಡರ 3 ಜನ ಗಂಡು ಮಕ್ಕಳಿಗೆ ಇ ಸ್ವತ್ತು ಆಗುವ ಪೂರ್ವದಲ್ಲಿ ಸ್ಕೆಚ್ ಆಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಾಗಪ್ಪಗೌಡರ ಮರಣ ನಂತರ 3 ಗುಂಟೆ ಜಾಗ ತಹಶೀಲ್ದಾರ್ ರವರ ಕಚೇರಿಯಲ್ಲಿ 3 ಜನ ಗಂಡು ಮಕ್ಕಳಿಗೆ ಖಾತೆಯಾಗಿರುವ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು)

**(ದಿನಾಂಕಃ 10.07.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ